ಇತಿಹಾಸವನ್ನು ಕೂಡ ಆಳವಾಗಿ ಅಧ್ಯಯನ ಮಾಡಿದವರು. ಇಂತಹ ಹಿನ್ನೆಲೆಯ ಅವರು ಕನ್ನಡ ಅಧ್ಯಾಪಕರಾದರೆ ವಿದ್ಯಾರ್ಥಿಗಳಿಗೆ ಕನ್ನಡ ಪ್ರೀತಿ ಮತ್ತು ಅಭಿಮಾನಗಳನ್ನು ಮೂಡಿಸಬಲ್ಲರು.'

ಜಿ. ವೆಂಕಟಸುಬ್ಬಯ್ಯನವರ ವೃತ್ತಿ ಜೀವನ ಮಂಡ್ಯದ ಪ್ರೌಢಶಾಲೆಯಿಂದ ಆರಂಭವಾಯಿತು. ಕೆಲಕಾಲ ತಾವು ಓದಿದ ಮೈಸೂರು ಮಹಾರಾಜ ಕಾಲೇಜಿನಲ್ಲಿಯೂ ಉಪನ್ಯಾಸಕರಾಗಿದ್ದರು. 1943ರಲ್ಲಿ ಬೆಂಗಳೂರಿಗೆ ಬಂದರು. ಕೆಲಕಾಲ ಬೆಂಗಳೂರು ಹೈಸ್ಕೂಲಿನಲ್ಲಿ ಅಧ್ಯಾಪಕರಾದರು. ಮುಂದೆ ವಿಜಯಾ ಕಾಲೇಜ್ ಸೇರಿದರು. ಅದೇ ಅವರ ಸಾಧನೆಯ ಕೇಂದ್ರವಾಯಿತು. ಉಪನ್ಯಾಸಕರಾಗಿ, ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಹಂತ ಹಂತವಾಗಿ ಅವರು ಮೇಲೇರಿದರು. ಆಡಳಿತದಲ್ಲಿ ಕೂಡ ದಕ್ಷ ಎನ್ನಿಸಿಕೊಂಡರು. ಆಕೃತಿಯಲ್ಲಿ ಕೊಂಚ ಕುಳ್ಳು ಎನ್ನಿಸಿದರೂ ಜಿ.ವಿಯವರದು ಪಾದರಸದ ಚಲನೆ. ಉಡುಗೆ ತೊಡುಗೆ ಮಾತು ಎಲ್ಲವೂ ಶಿಸ್ತಿನಿಂದ ಕೂಡಿದ್ದು. ಈ ಶಿಸ್ತು ಅವರಿಗೆ ಸ್ಕೌಟ್‌ನಿಂದ ದೊರೆತ ಕೊಡುಗೆ. ಆಗ ಸೂಟ್ ಎನ್ನುವುದು ಇಂಗ್ಲಿಷ್ ಅಧ್ಯಾಪಕರ ಸೊತ್ತು ಎನ್ನಿಸಿಕೊಂಡಿತ್ತು. ಜಿ.ವಿ ಅದನ್ನು ಮುರಿದರು. ಪತ್ರಕರ್ತ ಟಿಎಸ್ಸಾರ್ ಅವರ ಭಾಷೆಯಲ್ಲಿ ಹೇಳುವುದಾದರೆ, 'ಕನ್ನಡಕ್ಕೆ ಅವರು ಸೂಟ್ ತೊಡಿಸಿದರು'. ಅವರ ಬಳಿ ಬೂದು ಬಣ್ಣದ ಹೆರಾಲ್ಡ್ ಕಾರು ಇತ್ತು. ಆ ಕಾಲಕ್ಕೇ ಹದಿನೈದು ಸಾವಿರ ರೂಪಾಯಿ ಕೊಟ್ಟು ಅದನ್ನು ಕೊಂಡಿದ್ದರು. ಸುಮಾರು 30 ವರ್ಷ ಅವರೇ ಡ್ರೈವ್ ಮಾಡಿಕೊಂಡು ಕಾಲೇಜಿಗೆ ಬರುತ್ತಿದ್ದರು. ಅದನ್ನು ವಿದ್ಯಾರ್ಥಿಗಳು 'ಜಿ.ವಿಯವರ ಐರಾವತ' ಎಂದೇ ಕರೆಯುತ್ತಿದ್ದರು. ಅವರ ಕಾರನ್ನು ನೋಡುತ್ತಿದ್ದಂತೆಯೇ ಕಾರಿಡಾರಿನಲ್ಲಿ ಇದ್ದ ವಿದ್ಯಾರ್ಥಿಗಳು ಮೌನವಾಗಿ ಬಿಡುತ್ತಿದ್ದರು. ಸುಮ್ಮನೆ ತಿರುಗುವುದು, ಹರಟೆ ಹೊಡೆಯುವುದು ಜಿ.ವಿಯವರಿಗೆ ಎಂದಿಗೂ ಇಷ್ಟವಾಗುತ್ತಿರಲಿಲ್ಲ.

